◆ ನಿಮ್ಮ ಬರಹದ ಮೇಲಾದ ಪತ್ರಿಕಾ ಬರಹದ ಪ್ರಭಾವದ ಬಗ್ಗೆ ನೀವೇನು ಹೇಳುತ್ತೀರಿ?

ಈ ಪ್ರಭಾವ ಎರಡೂ ಕಡೆಯಿಂದಾಗಿದೆ. ಕಾದಂಬರಿ ಬರಹದಿಂದ ನನ್ನ ಪತ್ರಿಕಾ ಲೇಖನಕ್ಕೆ ಸಾಕಷ್ಟು ಸಹಾಯವಾಯಿತು. ಏಕೆಂದರೆ ಅದಕ್ಕೊಂದು ಸಾಹಿತ್ಯಿಕ ಮೌಲ್ಯವಿದೆ. ಪತ್ರಿಕಾ ಲೇಖನದಿಂದಾಗಿ ಕಾದಂಬರಿಯ ರಚನೆಗೆ ಸಹಾಯವಾಯಿತು. ನಾನು ಸತತ ವಾಸ್ತವದ ಅನುಕರಣೆ ಮಾಡಿದೆ.

◆ 'ಲೀಫ್ ಸ್ಟಾರ್ಮ್' – ಲೇಖನ ಶೈಲಿಯ ಬಗೆಗೆ ನಿಮ್ಮ ಅಭಿಪ್ರಾಯವೇನು?

'ಲೀಫ್ ಸ್ಟಾರ್ಮ್' ಬರೆದಾದ ಬಳಿಕ, ಗ್ರಾಮ್ಯ ಜೀವನದ ಬಗೆಗೆ, ಬಾಲ್ಯದ ಬಗೆಗೆ ಬರೆಯದೇ ಇರುವುದೆಂದರೆ ನಮ್ಮ ರಾಜಕೀಯ ವಾಸ್ತವವನ್ನು ನಿರಾಕರಿಸಿದಂತೆ – ಎಂದೆನಿಸಿತು. ನಾನು ಆತ್ಮರತಿಯಲ್ಲಿ ಮಗ್ನನಾಗಿದ್ದೇನೆ. ಇದೊಂದು ಬಗೆಯ ಪಲಾಯನವಾದ. ದೇಶದ ರಾಜಕೀಯ ವಿದ್ಯಮಾನದಿಂದ ದೂರ ಸರಿಯುವ ಪ್ರಯತ್ನವಾಗಿದೆ. ನಾನು ಸಾಹಿತ್ಯ ಮತ್ತು ರಾಜಕಾರಣದ ನಡುವಿನ ಕಂದಕವನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿದೆ. ನನ್ನ ಮೇಲೆ ಫಾಕ್ನರ್ ಹಾಗೂ ಹೆಮಿಂಗ್ವೇ ಪ್ರಭಾವವಿದೆ.

'ಇನ್ ಇವಿಲ್ ಅವರ್' – ಎಂಬ ಕಾದಂಬರಿ ಬರೆದಾದ ಬಳಿಕ, ನಾನದರಲ್ಲಿ ಬರೆದದ್ದೆಲ್ಲ ತಪ್ಪು ಎಂದೆನಿಸಿತು. ನನ್ನ ಬಾಲ್ಯದ ಬಗೆಗೆ ಬರೆದ ಬರವಣಿಗೆಯು ರಾಜಕೀಯ ಸ್ವರೂಪದ್ದಾಗಿದೆ. ಅದಕ್ಕೂ ಊರ ವಾಸ್ತವಕ್ಕೂ ಏನೂ ಸಂಬಂಧವಿಲ್ಲ. ಆಗಾಗ ನನ್ನ ಕೈಯಿಂದ ಜಾರಿಹೋಗುತ್ತಿರುವ ಈ ಧಾಟಿ ಕೊನೆಗೂ ಸಿಕ್ಕಿತು. ಅದೇ ಧಾಟಿಯನ್ನು ನಾನು 'ಒನ್ ಹಂಡ್ರೆಡ್...'ನಲ್ಲಿ ಹಿಡಿದಿಟ್ಟೆ. ನನ್ನಜ್ಜಿ ಕಥೆ ಹೇಳುವ ಮಾದರಿಯನ್ನೇ ನಾನಿಲ್ಲಿ ಅನುಸರಿಸಿದ್ದೇನೆ. ಅಜ್ಜಿಯ ಕಥೆಯಲ್ಲಿ ಅತಿರಮ್ಯತೆ, ನೈಸರ್ಗಿಕತೆ, ಸರಳತೆ ಇರುತ್ತಿತ್ತು. ನನಗೆ ನನ್ನ ಸಹಜವಾದ ಧಾಟಿ ಸಿಕ್ಕಿತು. ಬಳಿಕ ಹದಿನೆಂಟು ತಿಂಗಳು ನಾನು ಪ್ರತಿನಿತ್ಯ ಕೆಲಸ ಮಾಡಲಾರಂಭಿಸಿದೆ.

◆ ಅಜ್ಜಿಯ ಅತಿರಮ್ಯ, ಆದಿ ಭೌತಿಕ ಸಂಗತಿಗಳನ್ನು ಇಷ್ಟು ಸಹಜವಾಗಿ ಅದು ಹೇಗೆ ಹೇಳುವುದು ಸಾಧ್ಯವಾಯಿತು?

ನನಗನಿಸಿದಂತೆ, ಅಜ್ಜಿಯ ಮುಖದ ಮೇಲಿನ ಭಾವ ಹೆಚ್ಚು ಮಹತ್ವದ್ದಾಗಿತ್ತು. ಈ ಭಾವ ಬದಲಾಗುತ್ತಿರಲಿಲ್ಲ. ಎಲ್ಲರಿಗೂ ಅದರ ಬಗೆಗೆ ಅಚ್ಚರಿಯೆನಿಸುತ್ತಿತ್ತು. ಆರಂಭಕ್ಕೆ 'ಒನ್ ಹಂಡ್ರೆಡ್...' ಬರೆಯುವಾಗ ನನ್ನ ಶ್ರದ್ಧೆ ಮತ್ತು ನಂಬಿಕೆ ಇದರಲ್ಲಿ ಪ್ರತಿಬಿಂಬಿತವಾಗಿಲ್ಲ ಎಂದೇ ನನಗನಿಸಿತು. ಶ್ರದ್ಧೆ, ನಂಬಿಕೆ ಇರಲೇಬೇಕೆಂದು ಆನಂತರ ಅನಿಸಿತು. ಅಜ್ಜಿ ಕಥೆ ಹೇಳುವ ಮಾದರಿಯಲ್ಲಿ ಬರೆಯಬೇಕೆಂದು ಎಂದುಕೊಂಡೆ.

◆ 'ಒನ್ ಹಂಡ್ರೆಡ್...' ಕಾದಂಬರಿಯಲ್ಲಿರುವ ಇನ್ಸೋಮೇನಿಯಾ (ನಿದ್ರಾನಾಶ) ಪ್ಲೇಗ್‌ನ ಮೂಲ ಏನು?

ನನಗೆ ಸದಾ ಕಾಲ ಪ್ಲೇಗ್ ಬಗೆಗೆ ಕುತೂಹಲವಿತ್ತು. ಮಧ್ಯ ಯುಗೀನ ಕಾಲಘಟ್ಟದ ಪ್ಲೇಗ್ ಬಗೆಗೆ ನಾನು ಅಧ್ಯಯನ ಮಾಡಿದ್ದೇನೆ. ಡೆನಿಯಲ್ ಡಿಫೋನ 'ಏ ಜರ್ನಿ ಆಫ್ ದ ಪ್ಲೇಗ್ ಇಯರ್' – ಇಂದು ನನ್ನ ಅಚ್ಚುಮೆಚ್ಚಿನ ಪುಸ್ತಕ. ಡಿಫೋ ಪತ್ರಿಕಾ ಲೇಖಕನಾಗಿದ್ದರೂ, ಅವನು ಹೇಳುವುದು ಫ್ಯಾಂಟಸಿಯಾಗಿರುತ್ತಿತ್ತು. ಪ್ಲೇಗ್ ನನ್ನ ಕಥೆಯಲ್ಲಿ ಆಗಾಗ ಇಣುಕುತ್ತಿರುತ್ತದೆ ಮತ್ತು ಪ್ರತಿಸಲ ಒಂದು ಹೊಸ ರೂಪವನ್ನು ಧರಿಸಿ ಬರುತ್ತದೆ. 'ಇನ್ ಈವಿಲ್ ಆವರ್'ನಲ್ಲಿ ಅದು ಕಿರುಹೊತ್ತಿಗೆಯ ರೂಪದಲ್ಲಿ ಬರುತ್ತದೆ. ಕಾದಂಬರಿಯಲ್ಲಿಯ ರಾಜಕೀಯ ಹಿಂಸಾಚಾರವು ಪ್ಲೇಗ್‌ನಂತೇ ಇರುತ್ತದೆ.